[2019) 15 S.C.R. 19

ಶ್ರೀ ಪ್ರಭೋದ್ ಸಿ. ಎಚ್. ದಾಸ್ ಮತ್ತು ಮತ್ತೊಬ್ಬರು .

ವಿರುದ್ಧ

ಮಹಾಮಯ್ಯಾ ದಾಸ್ ಮತ್ತು ಇತರರು .

(2019ರ ಸಿವಿಲ್ ಮೇಲ್ಮನವಿ ಸಂಖ್ಯೆ 9407)

ಡಿಸೆಂಬರ್ 13, 2019

[ಎಸ್. ಅಬ್ದುಲ್ ನಜೀರ್ ಮತ್ತು ಸಂಜೀವ್ ಖನ್ನಾ, ನ್ಯಾಯಾಧೀಶರುಗಳು.]

ನಾಗರಿಕ ಪ್ರಕ್ರಿಯಾ ಸಂಹಿತೆ, 1908- ಆದೇಶ 41 ನಿಯಮ 17(1) ಕ್ಕೆ ವಿವರಣೆ -. ಪ್ರಕರಣವನ್ನು ಉಚ್ಚ ನ್ಯಾಯಾಲಯದ ಮುಂದೆ ವಿಚಾರಣೆಗಾಗಿ ಪಟ್ಟಿ ಮಾಡಲಾಗಿದ್ದು, ವಾದ ಕೇಳಲು ಪ್ರಕರಣವನ್ನು ಕೈಗೆತ್ತಿಕೊಂಡಾಗ, ಮೇಲ್ಮನವಿದಾರರು/ಪ್ರತಿವಾದಿಗಳ ವಕೀಲರು ಪ್ರಕರಣದಲ್ಲಿ ವಾದ ಮಂಡಿಸಲು ಹಾಜರಿರಲಿಲ್ಲ ಮತ್ತು ಅವರ ಪರವಾಗಿ ಯಾವುದೇ ವಿನಂತಿನ್ನು ಮಾಡಲಿಲ್ಲ -ಉಚ್ಚ ನ್ಯಾಯಾಲಯವು ಮೇಲ್ಮನವಿಯನ್ನು ಅರ್ಹತೆಗಳ ಆಧಾರದ ಮೇಲೆ ನಿರ್ಧರಿಸಲು ಮುಂದುವರಿಯಿತು- ಯುಕ್ತವಲ್ಲ -ಆದೇಶ 41 ನಿಯಮ 17 ಉಪ-ನಿಯಮ (1) ರಲ್ಲಿ ಕಾನೂನಿನ ಅಂಶವನ್ನು ಸ್ಪಷ್ಟಪಡಿಸಿರುವಂತೆ ಮೇಲ್ಮನವಿದಾರನು ಹಾಜರಾಗದ ಸಂದರ್ಭದಲ್ಲಿ ನ್ಯಾಯಾಲಯಕ್ಕೆ ಅರ್ಹತೆ ಆಧಾರದಮೇಲೆ ಮೇಲ್ಮನವಿಯನ್ನು ವಜಾಗೊಳಿಸಲು ಅಧಿಕಾರ ಇರುವುದಿಲ್ಲ- ಬೇರೆ ರೀತಿಯಲ್ಲಿ ಹೇಳುವುದಾದರೆ, ಮೇಲ್ಮನವಿದಾರ ಹಾಜರಾಗದಿದ್ದರೆ, ನ್ಯಾಯಾಲಯವು ಸೂಕ್ತವೆಂದು ಭಾವಿಸಿದರೆ ಹಾಜರಾತಿಯನ್ನು ತಪ್ಪಿಸಿದ್ದಕ್ಕಾಗಿ ಮೇಲ್ಮನವಿಯನ್ನು ವಜಾಗೊಳಿಸಬಹುದು ಆದರೆ ಅರ್ಹತೆ ಆಧಾರದ ಮೇಲೆ ಮೇಲ್ಮನವಿಯನ್ನು ವಜಾಗೊಳಿಸುವ ಅಧಿಕಾರವನ್ನು ಹೊಂದಿಲ್ಲ-ಆದ್ದರಿಂದ, ಉಚ್ಚ ನ್ಯಾಯಾಲಯದ ಆಕ್ಷೇಪಿತ ತೀರ್ಪನ್ನು ರದ್ದುಮಾಡಿದೆ ಮತ್ತು ಕಾನೂನಿನ ಪ್ರಕಾರ ಹೊಸದಾಗಿ ಇತ್ಯರ್ಥಪಡಿಸಲು ಪ್ರಕರಣವನ್ನು ಉಚ್ಚ ನ್ಯಾಯಾಲಯಕ್ಕೆ ರವಾನೆ ಮಾಡಿದೆ.

ತೀರ್ಮಾನ: 1976ರ ಅಧಿನಿಯಮ104 ರ ಮೂಲಕ ವಿವರಣೆಯನ್ನು ನಿಯಮ 17 ಉಪನಿಯಮ (1)ನ್ನು ಸೇರಿಸಲಾಗಿದೆ . 1976ಕ್ಕಿಂತ ಮೊದಲು ದೇಶದ ವಿವಿಧ ಉಚ್ಚ ನ್ಯಾಯಾಲಯಗಳು ಆದೇಶ 41 ನಿಯಮ 17 ಉಪನಿಯಮ (1) ರ ಉದ್ದೇಶ ಮತ್ತು ಅರ್ಥದ ಬಗ್ಗೆ ತದ್ವಿರುದ್ಧವಾದ ಅಭಿಪ್ರಾಯಗಳನ್ನು ವ್ಯಕ್ತ ಪಡಿಸಿದ್ದವು. ಆದ್ದರಿಂದ, ಮೇಲ್ಮನವಿದಾರ ಹಾಜರಾಗದಿದ್ದಲ್ಲಿ, ಅರ್ಹತೆಯ ಆಧಾರದ ಮೇಲೆ ಮೇಲ್ಮನವಿಯನ್ನು ವಜಾಗೊಳಿಸಲು ನ್ಯಾಯಾಲಯಕ್ಕೆ ಯಾವುದೇ ಅಧಿಕಾರವಿಲ್ಲ ಎಂಬ ಅಭಿಪ್ರಾಯ ವ್ಯಕ್ತಪಡಿಸಿ ನಿಬಂಧನೆಯನ್ನು ಮಾಡುವ ಮೂಲಕ ಕಾನೂನನ್ನು ಸ್ಪಷ್ಟಪಡಿಸಲು 01.02.1977 ರಿಂದ ವಿವರಣೆಯನ್ನು ಸೇರಿಸಲಾಯಿತು. ಹೀಗಾಗಿ, ಆದೇಶ 41 ನಿಯಮ 17 (1) ಅನ್ನು ಅದರ ವಿವರಣೆಯೊಂದಿಗೆ ಓದಿದರೆ, ಮೇಲ್ಮನವಿದಾರ ವಿಚಾರಣೆಗೆ ನಿಗದಿಪಡಿಸಿದ ದಿನಾಂಕದಂದು ಗೈರುಹಾಜರಾಗದಿದ್ದಲ್ಲಿ ನ್ಯಾಯಾಲಯವು ಅರ್ಹತೆಯ ಆಧಾರದ ಮೇಲೆ ಮೇಲ್ಮನವಿಯನ್ನು ವಜಾಗೊಳಿಸಲು ಸಾಧ್ಯವಿಲ್ಲ ಎಂದು ಸ್ಪಷ್ಟಡಿಸಲಾಗಿದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಮೇಲ್ಮನವಿದಾರ ಹಾಜರಾಗದಿದ್ದರೆ, ನ್ಯಾಯಾಲಯವು ಸೂಕ್ತವೆಂದು ಭಾವಿಸಿದರೆ ಗೈರುಹಾಜರಿ ತಪ್ಪಿಗಾಗಿ ಮೇಲ್ಮನವಿಯನ್ನು ವಜಾಗೊಳಿಸಬಹುದು ಆದರೆ ಅರ್ಹತೆಯ ಆಧಾರದ ಮೇಲೆ ಮೇಲ್ಮನವಿಯನ್ನು ವಜಾಗೊಳಿಸುವ ಅಧಿಕಾರವನ್ನು ಹೊಂದಿರುವುದಿಲ್ಲ. [ಪ್ಯಾರ 9] [21-ಜಿ; 22-ಎ]

ಅಬ್ದುರ್ ರಹಮಾನ್ ಮತ್ತು ಇತರರು ವರ್ಸಸ್ ಅತಿಫಾ ಬೇಗಂ ಮತ್ತು ಇತರರು (1996) 5 ಎಸ್. ಸಿ. ಸಿ 62: [1996] 5 ಪೂರಕ. ಎಸ್. ಸಿ.ಆರ್ 391; ಘನಶ್ಯಾಮ್ ದಾಸ್ ಗುಪ್ತಾ ವರ್ಸಸ್ ಮಖನ್ ಲಾಲ್ (2012) 8 ಎಸ್ಸಿಸಿ 745 [2012] 8 ಎಸ್ ಸಿ ಆರ್ 153- ಮೇಲೆ ಅವಲಂಬಿತವಾಗಿದೆ.

ಪ್ರಕರಣ ಕಾನೂನು ಉಲ್ಲೇಖ

[1996] 5 ಪೂರಕ.ಎಸ್. ಸಿ. ಆರ್ 391 ಪ್ಯಾರ 10ನ್ನು ಅವಲಂಬಿಸಿದೆ.

[2012] 8 ಎಸ್. ಸಿ. ಆರ್. 153 ಪ್ಯಾರಾ 10ನ್ನು ಅವಲಂಬಿಸಲಾಗಿದೆ .

ಸಿವಿಲ್ ಮೇಲ್ಮನವಿ ಅಧಿಕಾರವ್ಯಾಪ್ತಿ: ಸಿವಿಲ್ ಮೇಲ್ಮನವಿ ಸಂಖ್ಯೆ 9407/2019.

ಆರ್. ಎಸ್. ಎ. ಸಂಖ್ಯೆ 45/2006 ರಲ್ಲಿ ಅಗರ್ತಲಾದಲ್ಲಿರುವ ತ್ರಿಪುರಾ ಉಚ್ಚ ನ್ಯಾಯಾಲಯವು ದಿನಾಂಕ 21-01-2015 ರಂದು ನೀಡಿದ ತೀರ್ಪು ಮತ್ತು ಆದೇಶದ ಮೇಲೆ

ಪಿಜುಶ್ ಕೆ. ರಾಯ್, ಶ್ರೀಮತಿ ಕಾಕಲಿ ರಾಯ್, ರಾಜನ್ ಕೆ. ಚೌರಾಸಿಯಾ, ಡಾ. ನಿರ್ಮಲ್ ಚೋಪ್ರಾ, ಅಡ್ವೋಕೇಟ್ಸ್ ಹಾಜರಾಗಿರುವ ಪಕ್ಷಕಾರರಿಗೆ.

ನ್ಯಾಯಾಲಯದ ತೀರ್ಪನ್ನು ನೀಡಿದವರು

ಎಸ್. ಅಬ್ದುಲ್ ನಜೀರ್, ನ್ಯಾಯಾಧೀಶರು,

1. ಅನುಮತಿ ನೀಡಲಾಗಿದೆ.

2. ಈ ಮೇಲ್ಮನವಿಯಲ್ಲಿ ಪರಿಗಣಿಸಬೇಕಾಗಿರುವ ಪ್ರಶ್ನೆಯೆಂದರೆ, ಮೇಲ್ಮನವಿದಾರರ ಮಾನ್ಯ ವಕೀಲರ ಅನುಪಸ್ಥಿತಿಯಲ್ಲಿ ಅರ್ಹತೆಯ ಆಧಾರದ ಮೇಲೆ ಎರಡನೇ ಮೇಲ್ಮನವಿಯನ್ನು ವಜಾಗೊಳಿಸಿದ ಉಚ್ಚ ನ್ಯಾಯಾಲಯದ ಆದೇಶ ಸಮರ್ಥನೀಯವಾಗಿದೆಯೇ ಎಂಬುದು.

3. ಇಲ್ಲಿ ಮೇಲ್ಮನವಿದಾರರು ಸಿವಿಲ್ ನ್ಯಾಯಾಧೀಶರು (ಕಿರಿಯ ವಿಭಾಗ) ಖೋವಾಯಿ ಅವರ ಕಡತ ಟಿ. ಎಸ್. 10/2000 ರ ದಾವೆಯಲ್ಲಿ ಪ್ರತಿವಾದಿಗಳಾಗಿದ್ದಾರೆ ಮತ್ತು ಸದರಿ ಪ್ರಕರಣದ ಪ್ರತಿವಾದಿಗಳು ಇಲ್ಲಿ ಎದುರುದಾರರಾಗಿದ್ದಾರೆ. ಫಿರ್ಯಾದಿಗಳು ತಮ್ಮ ಹಕ್ಕುಸ್ವಾಮ್ಯದ ಘೋಷಣೆ, ಸ್ವಾಧೀನ ಕೊಡಿಸಲು ಕೇಳಿ ಮತ್ತು ಆದಾಯದಲ್ಲಿ ತಮ್ಮ ಪಾಲು ಕೇಳಿ ದಾವೆಯನ್ನು ಸಲ್ಲಿಸಿದ್ದರು. ವಿಚಾರಣೆ ನ್ಯಾಯಾಲಯವು 19.08.2002 ರಂದು ಮೇಲಿನ ದಾವೆಯನ್ನು ವಜಾಗೊಳಿಸಿತು. ಅಸಮಾಧಾನಗೊಂಡ ಫಿರ್ಯಾದಿಗಳು ಮೇಲ್ಮನವಿ ಸಂಖ್ಯೆ 2/2003ರಲ್ಲಿ ಮೇಲ್ಮನವಿಯನ್ನು ಪಶ್ಚಿಮ ತ್ರಿಪುರಾದ ಖೋವಾಯಿಯ ಹೆಚ್ಚುವರಿ ಜಿಲ್ಲೆ ನ್ಯಾಯಾಧೀಶರ ಮುಂದೆ ಸಲ್ಲಿಸಿದರು.ಜಿಲ್ಲಾ ನ್ಯಾಯಾಧೀಶರುರು 30.06.2006 ರಂದು ಮೇಲ್ಮನವಿಯನ್ನು ಪುರಸ್ಕರಿಸಿದರು ಹಾಗೂ ವಿಚಾರಣೆ ನ್ಯಾಯಾಲಯದ ಐತೀರ್ಪು ಮತ್ತು ಆದೇಶವನ್ನು ರದ್ದುಮಾಡಿದರು ಮತ್ತು ಫಿರ್ಯಾದಿಗಳನ್ನು ದಾವಾ ಭೂಮಿಯ ಮಾಲೀಕರು ಎಂದು ಘೋಷಿಸಿದರು. ಇದಲ್ಲದೆ, ಫಿರ್ಯಾದಿಗಳು

ದಾವ ಆಸ್ತಿಯ ಸ್ವಾಧೀನ ಪಡೆದುಕೊಳ್ಳಲು ಸಹ ಅರ್ಹರಾಗಿದ್ದಾರೆ ಎಂದು ನಿರ್ಣಯಿಸಲಾಯಿತು. ಮೊದಲ ಮೇಲ್ಮನವಿ ನ್ಯಾಯಾಲಯದ ಈ ತೀರ್ಪನ್ನು ಪ್ರತಿವಾದಿಗಳು 2006ರ ಆರ್. ಎಸ್. ಎ. ಪ್ರಕರಣ ಸಂಖ್ಯೆ 45/2006 ರಲ್ಲಿ ಗುವಾಹಟಿ ಉಚ್ಚ ನ್ಯಾಯಾಲಯದ ಮುಂದೆ ಪ್ರಶ್ನಿಸಿದ್ದರು.

4. ಪ್ರಕರಣದ ಕಡತದಲ್ಲಿರುವ ಮಾಹಿತಿಗಳಿಂದ ಕಂಡುಬರುವುದೇನೆಂದರೆ ಮೇಲ್ಮನವಿಯನ್ನು ಹಲವಾರು ಬಾರಿ ವಿಚಾರಣೆಗಾಗಿ ಪಟ್ಟಿ ಮಾಡಲಾಗಿತ್ತು ಎಂಬುದು ದಾಖಲೆಯಲ್ಲಿ ಲಭ್ಯವಿರುವ ಮಾಹಿತಿಗಳಿಂದ ಸ್ಪಷ್ಟವಾಗುತ್ತದೆ.. 21.01.2015 ರಂದು ಪ್ರಕರಣವನ್ನು ವಿಚಾರಣೆಗಾಗಿ ಕೈಗೆತ್ತಿಕೊಂಡಾಗ, ಮೇಲ್ಮನವಿದಾರರು/ಪ್ರತಿವಾದಿಗಳ ಪರ ವಕೀಲರು ಪ್ರಕಾರಣದಲ್ಲಿ ವಾದಮಂಡಿಸಲು ಹಾಜರಿರಲಿಲ್ಲ ಮತ್ತು ಅವರ ಪರವಾಗಿ ಸಮಯಕ್ಕಾಗಿ ಯಾವುದೇ ವಿನಂತಿನ್ನು ಸಹ ಮಾಡಲಾಗಲಿಲ್ಲ. ಆದ್ದರಿಂದ, ಉಚ್ಚ ನ್ಯಾಯಾಲಯವು ಅರ್ಹತೆಯ ಆಧಾರದ ಮೇಲೆಯೇ ಮೇಲ್ಮನವಿಯನ್ನು ತೀರ್ಮಾನ ಮಾಡಲು ಮುಂದಾಯಿತು ಹಾಗು ದಾಖಲೆಯಲ್ಲಿರುವ ಅಂಶಗಳನ್ನು ಪರಿಗಣಿಸಿ, ಉಚ್ಚ ನ್ಯಾಯಾಲಯವು ಅರ್ಹತೆಯ ಆಧಾರದ ಮೇಲೆ ಮನವಿಯನ್ನು ವಜಾಗೊಳಿಸಿತು.

5. ನಾವು ಪಕ್ಷಕಾರರ ಮಾನ್ಯ ವಕೀಲರ ವಾದವನ್ನು ಆಲಿಸಿದ್ದೀವೆ.

6. ಮೇಲ್ಮನವಿದಾರರ ಪರ ಮಾನ್ಯ ವಕೀಲರು ಎತ್ತಿದ ಏಕೈಕ ವಾದವೆಂದರೆ, ಮೇಲ್ಮನವಿದಾರರ ಪರ ವಕೀಲರ ಅನುಪಸ್ಥಿತಿಯಲ್ಲಿ ಅರ್ಹತೆಯ ಆಧಾರದ ಮೇಲೆ ಮೇಲ್ಮನವಿಯನ್ನು ವಜಾಗೊಳಿಸುವಲ್ಲಿ ಉಚ್ಚ ನ್ಯಾಯಾಲಯವು ಸಮರ್ಥನೀಯವಾಗಿರಲಿಲ್ಲ.ಅವರ ವಾದವನ್ನು ಬೆಂಬಲಿಸಲು ಮೇಲ್ಮನವಿದಾರರ ಮಾನ್ಯ ವಕೀಲರು ಸಿವಿಲ್ ಪ್ರಕ್ರಿಯಾ ಸಂಹಿತೆ, 1908 (ಸಂಕ್ಷಿಪ್ತವಾಗಿ ಸಿಪಿಸಿ) ನಿಯಮ 17 (1) ನ್ನು ಉಲ್ಲೇಕಿಸಿರುತ್ತಾರೆ .ಮತ್ತೊಂದೆಡೆ, ಪ್ರತಿವಾದಿಗಳ ಪರ ವಕೀಲು ಉಚ್ಚ ನ್ಯಾಯಾಲಯದ ತೀರ್ಪನ್ನು ಬೆಂಬಲಿಸಿದ್ದಾರೆ.

7. ಮೇಲ್ಮನವಿದಾರರ ಪರ ವಕೀಲರು ನ್ಯಾಯಾಲಯದಲ್ಲಿ ಪ್ರಕರಣದ ವಿಚಾರಣಾ ದಿನಾಂಕವನ್ನು ಪಟ್ಟಿಮಾಡಿದ್ದ ದಿನಾಂಕ 21-01-2015ರಂದು ವಿಷಯವನ್ನು

ವಾದಿಸಲು ನ್ಯಾಯಾಲಯದಲ್ಲಿ ಹಾಜರಿರಲಿಲ್ಲ ಮತ್ತು ಅವರ ಪರವಾಗಿ ಸಮಯಕ್ಕಾಗಿ ಯಾವುದೇ ವಿನಂತಿನ್ನು ಸಹ ಮಾಡಲಾಗಿಲ್ಲ ಎಂಬುದರ ಬಗ್ಗೆ ಯಾವುದೇ ವಿವಾದ ಇಲ್ಲ. ಆ ಕಾರಣಕ್ಕಾಗಿ ಉಚ್ಚ ನ್ಯಾಯಾಲಯವು ಅರ್ಹತೆಯ ಆಧಾರದ ಮೇಲೆ ಮೇಲ್ಮನವಿಯನ್ನು ತೀರ್ಮಾನಿಸಲು ಮುಂದಾಯಿತು.

8. ಸಿವಿಲ್ ಪ್ರಕ್ರಿಯಾ ಸಂಹಿತೆ ಆದೇಶ 41 ನಿಯಮ 17 (1) ಈ ಕೆಳಗಿನಂತಿದೆಃ

"ನಿಯಮ. 17: ಮೇಲ್ಮನವಿದಾರನ ತಪ್ಪಿಗಾಗಿ ಮೇಲ್ಮನವಿಯನ್ನು ವಜಾ ಮಾಡುವುದು:- (1) ನಿಗದಿಪಡಿಸಿದ ದಿನದಂದು ಅಥವಾ ವಿಚಾರಣೆಯನ್ನು ಮುಂದೂಡಲಾಗಿದ್ದ ಯಾವುದೇ ದಿನದಂದು, ಮೇಲ್ಮನವಿಯನ್ನು ವಿಚಾರಣೆಗೆ ತೆಗೆದುಕೊಂಡಾಗ ಮೇಲ್ಮನವಿದಾರನು ಹಾಜರಾಗದಿದ್ದರೆ, ನ್ಯಾಯಾಲಯವು ಮೇಲ್ಮನವಿಯನ್ನು ವಜಾಗೊಳಿಸಿ ಆದೇಶ ನೀಡಬಹುದು.

[ವಿವರಣೆ.-ಈ ಉಪ-ನಿಯಮದಲ್ಲಿನ ಯಾವುದನ್ನೂ ಅರ್ಹತೆಗಳ ಆಧಾರದ ಮೇಲೆ ಮೇಲ್ಮನವಿಯನ್ನು ವಜಾಗೊಳಿಸಲು ನ್ಯಾಯಾಲಯಕ್ಕೆ ಅಧಿಕಾರ ನೀಡುತ್ತದೆ ಎಂದು ಅರ್ಥೈಸುವಂತಿಲ್ಲ.]

9. ನಿಯಮ 17ರ ಉಪ-ನಿಯಮ (1) ಕ್ಕೆ ಸ್ಪಷ್ಟೀಕರಣವನ್ನು 1976 ರ ಅಧಿನಿಯಮ 104ನ್ನು ರಚಿಸಿದಾಗ ಸೇರಿಸಲಾಗಿದೆ.1976ಕ್ಕಿಂತ ಮೊದಲು ದೇಶದ ವಿವಿಧ ಉಚ್ಚ ನ್ಯಾಯಾಲಯಗಳು ಸಿ. ಪಿ. ಸಿ. ಯ ಆದೇಶ 41ರ ನಿಯಮ 17 ಉಪ-ನಿಯಮದ (1) ಉದ್ದೇಶ ಮತ್ತು ಅರ್ಥದ ಬಗ್ಗೆ ತದ್ವಿರುದ್ದ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದವು. ಆದ್ದರಿಂದ, ಮೇಲ್ಮನವಿದಾರ ಹಾಜರಾಗದಿದ್ದಲ್ಲಿ, ಅರ್ಹತೆಯ ಆಧಾರದ ಮೇಲೆ ಮೇಲ್ಮನವಿಯನ್ನು ವಜಾಗೊಳಿಸಲು ನ್ಯಾಯಾಲಯಕ್ಕೆ ಯಾವುದೇ ಅಧಿಕಾರವಿಲ್ಲ ಎಂಬ ನಿಬಂಧನೆಯನ್ನು ಮಾಡುವ ಮೂಲಕ ಕಾನೂನನ್ನು ಸ್ಪಷ್ಟಪಡಿಸಲು 01.02.1977 ರಿಂದ ವಿವರಣೆಯನ್ನು ಸೇರಿಸಲಾಯಿತು. ಹೀಗಾಗಿ, ಆದೇಶ 41 ನಿಯಮ 17 (1) ಅನ್ನು ಅದರ ವಿವರಣೆಯೊಂದಿಗೆ ಓದಿದರೆ ಮೇಲ್ಮನವಿದಾರ ವಿಚಾರಣೆಗೆ ನಿಗದಿಪಡಿಸಿದ ದಿನಾಂಕದಂದು ಗೈರುಹಾಜರಾಗಿದ್ದರೆ ನ್ಯಾಯಾಲಯವು ಅರ್ಹತೆಯ ಆಧಾರದ ಮೇಲೆ ಮೇಲ್ಮನವಿಯನ್ನು ವಜಾಗೊಳಿಸಲು ಸಾಧ್ಯವಿಲ್ಲ ಎಂಬುದು

ಸ್ಪಷ್ಟಪಡಿಸುತ್ತದೆ. ಬೇರೆ ರೀತಿಯಲ್ಲಿ ಹೇಳುವುದಾದರೆ, ಮೇಲ್ಮನವಿದಾರ ಹಾಜರಾಗದಿದ್ದರೆ ಹಾಗು ನ್ಯಾಯಾಲಯವು ಸೂಕ್ತವೆಂದು ಭಾವಿಸಿದರೆ ಹಾಜರಾಗಲು ತಪ್ಪಿಸಿಕೊಂಡಿದ್ದಕ್ಕಾಗಿ ಮೇಲ್ಮನವಿಯನ್ನು ವಜಾಗೊಳಿಸಬಹುದು ಆದರೆ ಅರ್ಹತೆಯ ಆಧಾರದ ಮೇಲೆ ಮೇಲ್ಮನವಿಯನ್ನು ವಜಾಗೊಳಿಸಲು ಅಧಿಕಾರ ಹೊಂದಿರುವುದಿಲ್ಲ.

10. ಈ ನಿಲುವನ್ನು ಈ ನ್ಯಾಯಾಲಯವು 'ಅಬ್ದುರ್ ರಹಮಾನ್ ಮತ್ತು ಇತರರು ವರ್ಸಸ್ ಅತಿಫಾ ಬೇಗಂ ಮತ್ತು ಇತರರು' ಪ್ರಕರಣದಲ್ಲಿ ಸ್ಪಷ್ಟಪಡಿಸಿದೆ. ಅದರಲ್ಲಿ ಮೇಲ್ಮನವಿದಾರದಾರರು ಹಾಜರಾಗದಿದ್ದಾಗ ನ್ಯಾಯಾಲಯವು ಪ್ರಕರಣದ ಅರ್ಹತೆಗಳನ್ನು ಪರಿಶೀಲಿಸಲು ಸಾಧ್ಯವಿಲ್ಲ ಎಂದು ತೀರ್ಪು ನೀಡಲಾಗಿದೆ. 'ಘನಶ್ಯಾಮ್ ದಾಸ್ ಗುಪ್ತಾ ವಿರುದ್ಧ ಮಖನ್ ಲಾಲ್' ಪ್ರಕರಣದಲ್ಲಿ ಈ ನ್ಯಾಯಾಲಯವು ಈ ಕೆಳಗಿನಂತೆ ಕಾನೂನಿನ ನಿಲುವನ್ನು ಪುನರುಚ್ಚರಿಸಿದೆಃ

"1976ಕ್ಕಿಂತ ಮೊದಲು, ದೇಶದ ವಿವಿಧ ಉಚ್ಚ ನ್ಯಾಯಾಲಯಗಳು ಸಿ. ಪಿ. ಸಿ. ಆದೇಶ 41ರ ನಿಯಮ 17ರ ಉಪ ನಿಯಮ (1) ರ ಉದ್ದೇಶ ಮತ್ತು ಅರ್ಥದ ಬಗ್ಗೆ ತದ್ವಿರುದ್ಧ ಅಭಿಪ್ರಾಯಗಳನ್ನು ವ್ಯಕ್ತಪಡಿಸುತ್ತಿದ್ದವು. ವಿಚಾರಣೆಯ ಸಮಯದಲ್ಲಿ ಮೇಲ್ಮನವಿದಾರದಾರರ ಪರವಾಗಿ ಯಾರೂ ಹಾಜರಾಗದೆ ಇದ್ದರೂ, ಮೇಲ್ಮನವಿ ನ್ಯಾಯಾಲಯ ಅರ್ಹತೆಯ ಆಧಾರದ ಮೇಲೆ ಮೇಲ್ಮನವಿದಾರಯನ್ನು ಪರಿಗಣಿಸಲು ಮುಕ್ತವಾಗಿದೆ ಎಂದು ಕೆಲವು ಉಚ್ಚ ನ್ಯಾಯಾಲಯಗಳು ಅಭಿಪ್ರಾಯಪಟ್ಟಿದ್ದವು. ಕೆಲವು ಉಚ್ಚ ನ್ಯಾಯಾಲಯಗಳು, ಯಾವುದೇ ಉಚ್ಚ ನ್ಯಾಯಾಲಯವು ಈ ವಿಷಯವನ್ನು ಅರ್ಹತೆಯ ಆಧಾರದ ಮೇಲೆ ನಿರ್ಧರಿಸಲು ಸಾಧ್ಯವಿಲ್ಲ, ಆದರೆ ಮೇಲ್ಮನವಿದಾರನು ಹಾಜರಾಗಲು ವಿಫಲನಾದರೆ ಮೇಲ್ಮನವಿಯನ್ನು ಆ ಕಾರಣಕ್ಕಾಗಿ ವಜಾಗೊಳಿಸಬಹುದು ಎಂಬ ಅಭಿಪ್ರಾಯವನ್ನು ಹೊಂದಿದ್ದವು. ವಿವಿಧ ಉಚ್ಚ ನ್ಯಾಯಾಲಯಗಳು ನೀಡಿದ ತದ್ವಿರುದ್ಧ ಅಭಿಪ್ರಾಯಗಳು ಹೆಚ್ಚಿನ ವ್ಯಾಜ್ಯಗಳಿಗೆ ಕಾರಣವಾದವು. ಆದ್ದರಿಂದ, ಶಾಸಕಾಂಗವು ತನ್ನ ವಿವೇಕದಲ್ಲಿ, ಈ ನಿಲುವನ್ನು ನಿಸ್ಸಂದೇಹವಾಗಿ ಸ್ಪಷ್ಟಪಡಿಸಬೇಕು ಎಂದು ಭಾವಿಸಿತು. ಇದರ ಪರಿಣಾಮವಾಗಿ, 1976ರ ಅಧಿನಿಯಮ 104ರ ಮೂಲಕ ಆದೇಶ 41 ಸಿಪಿಸಿಯ

ನಿಯಮ 17ರ ಉಪ-ನಿಯಮ (1) ಕ್ಕೆ ವಿವರಣೆಯನ್ನು ಸೇರಿಸಲಾಯಿತು. ಆದೇಶ 41 ಸಿಪಿಸಿ ನಿಯಮ 17ರ ಉಪ-ನಿಯಮ (1) ರಂತೆ ಒಂದುವೇಳೆ ಮೇಲ್ಮನವಿದಾರ ಪ್ರಕರಣದಲ್ಲಿ ವಿಚಾರಣೆಗೆ ಹಾಜರಿರದಿದ್ದಲ್ಲಿ ಅಥವಾ ಮೇಲ್ಮನವಿಯನ್ನು ವಿಚಾರಣೆಗಾಗಿ ನಿಗದಿಪಡಿಸಿದ ದಿನದಂದು ಪ್ರತಿನಿಧಿತ್ವವಿಲ್ಲದೆ ಉಳಿದಲ್ಲಿ ಅರ್ಹತೆಗಳ ಆಧಾರದ ಮೇಲೆ ಮೇಲ್ಮನವಿಯನ್ನು ವಜಾಗೊಳಿಸಲು ಮೇಲ್ಮನವಿ ನ್ಯಾಯಾಲಯ ಅಧಿಕಾರ ಹೊಂದಿರುವುದಿಲ್ಲ ಎಂದು ಸ್ಪಷ್ಟಪಡಿಸುತ್ತದೆ. ಅಂತಹ ವಿವರಣೆಯನ್ನು ಅಧಿನಿಯಮದಲ್ಲಿ ಸೇರಿಸಲು ಕಾರಣವೆಂದರೆ, ಹಾಜರಾಗದಿರುವುದಕ್ಕೆ ಸಾಕಷ್ಟು ಕಾರಣ ಇತ್ತು ಎಂದು ಮೇಲ್ಮನವಿ ನ್ಯಾಯಾಲಯಕ್ಕೆ ಮನವರಿಕೆ ಮಾಡಲು ಮೇಲ್ಮನವಿದಾರದಾರರಿಗೆ ಅದು ಅವಕಾಶ ನೀಡುತ್ತದೆ. ಮೇಲ್ಮನವಿದಾರದಾರರ ವಕೀಲರ ಅನುಪಸ್ಥಿತಿಯಲ್ಲಿ ನ್ಯಾಯಾಲಯಗಳು ಅರ್ಹತೆಯ ಆಧಾರದ ಮೇಲೆ ಮೇಲ್ಮನವಿದಾರಯನ್ನು ನಿರ್ಧರಿಸಿದರೆ ಅಂತಹ ಅವಕಾಶವು ಕಳೆದುಹೋಗುತ್ತದೆ."

11. ಪ್ರಸ್ತುತ ಪ್ರಕರಣದ ವಾಸ್ತವಾಂಶಗಳಿಗೆ ಬಂದಾಗ, ನ್ಯಾಯಾಲಯವು ಅರ್ಹತೆಯನ್ನು ಪರಿಗಣಿಸಿದ ನಂತರ ಮೇಲ್ಮನವಿಯನ್ನು ತೀರ್ಮಾಸಿದೆ ಎಂದು ಕಂಡುಬರುತ್ತದೆ. ಸಂಬಂದಿಸಿದ ದಿನಾಂಕದಂದು ಶ್ರೀ ಲೋಧ್ ಅವರ ಪರವಾಗಿ ಮುಂದೂಡಲು ವಿನಂತಿನ್ನು ಮಾಡಲಾಗಿದ್ದು, ಅದರಂತೆ ಪ್ರಕರಣವನ್ನು ದಿನಾಂಕ 18.12.2014 ಕ್ಕೆ ಮುಂದೂಡಲಾಗಿತ್ತು ನಂತರ ದಿನಾಂಕ 18.12.2014 ರಂದು ಶ್ರೀ ಚೌಧರಿ ಪ್ರಕರಣ ಮುಂದೂಡಲು ವಿನಂತಿನ್ನು ಮಾಡಿದ್ದರು. ಅಂದು ಶ್ರೀ ಚೌಧರಿಯವರು ವಿಷಯದ ಬಗ್ಗೆ ವಾದಿಸಲು ಹಾಜರು ಕೂಡ ಆಗಲಿಲ್ಲ ಮತ್ತು ಅವರ ಪರವಾಗಿ ಸಮಯಕ್ಕಾಗಿ ಯಾವುದೇ ವಿನಂತಿನ್ನು ಸಹ ಮಾಡಲಿಲ್ಲ. ಆದ್ದರಿಂದ, ನಾನು ಅರ್ಹತೆಯ ಆಧಾರದ ಮೇಲೆ ಮೇಲ್ಮನವಿಯನ್ನು ತೀರ್ಮಾನಿಸಲು ಮುಂದುವರಿಯುತ್ತೇನೆ...." ಈ ಆದೇಶ ಸಿಪಿಸಿ ಆದೇಶ XLI ನಿಯಮ 17 (1) ಅನ್ನು ಸ್ಪಷ್ಟವಾಗಿ ಉಲ್ಲಂಘಿಸಿದೆ.

12. ಆದ್ದರಿಂದ, ನಾವು ಉಚ್ಚ ನ್ಯಾಯಾಲಯದ ಪ್ರಶ್ನಿತ ಐತೀರ್ಪು ಮತ್ತು ಆದೇಶವನ್ನು ತಳ್ಳಿಹಾಕಿ ಕಾನೂನಿನ ಪ್ರಕಾರ ಹೊಸದಾಗಿ ಇತ್ಯರ್ಥಪಡಿಸುವ

ಸಲುವಾಗಿ ಮೊಕದ್ದಮೆಯನ್ನು ಉಚ್ಚ ನ್ಯಾಯಾಲಯಕ್ಕೆ ವಾಪಸ್ ಕಳುಹಿಸುತ್ತಿದ್ದೀವೆ. ಮೇಲ್ಮನವಿಯನ್ನು ಮೇಲಿನ ಆದೇಶಕ್ಕನುಸಾರವಾಗಿ ವಿಲೇವಾರಿ ಮಾಡಲಾಗಿದೆ. ಆದಾಗ್ಯೂ, ವೆಚ್ಚಗಳ ಬಗ್ಗೆ ಯಾವುದೇ ಆದೇಶ ಇರುವುದಿಲ್ಲ.

ಮನವಿಯನ್ನು ವಜಾಗೊಳಿಸಲಾಗಿದೆ.